# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1590

2. ಸದಸ್ಯರ ಹೆಸರು : ಶ್ರೀ ಕೆ.ಗೋವಿಂದರಾಜ್

3. ಉತ್ತರಿಸಲು ನಿಗದಿಯಾಗಿದ್ದ ದಿನಾಂಕ : 18.03.2021

| ಕ್ರ.ಸಂ. | ಪ್ರಶ್ನೆ | ಉತ್ತರಗಳು |
|---|---|---|
| (ಅ) | ಪ್ರಸ್ತುತ ಕರ್ನಾಟಕ ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ ಅಂತರ ರಾಜ್ಯ ಜಲ ವಿವಾದಗಳಿಗೆ ಸಂಬಂಧಿಸಿದಂತೆ ಎದುರಿಸುತ್ತಿರುವ ವ್ಯಾಜ್ಯ/ವಿವಾದಗಳು ಯಾವುವು; ಈ ವಿವಾದಗಳು ಯಾವ ಯಾವ ರಾಜ್ಯಗಳ ಜೊತೆ ಈ ವಿವಾದಗಳು ಮುಂದುವರಿಯುತ್ತಿವೆ; ಈ ವಿವಾದಗಳ ಕುರಿತಾಗಿ ಇದುವರೆಗಿನ ಪ್ರಗತಿ ಏನು;(ಸಂಪೂರ್ಣ ಮಾಹಿತಿ ಒದಗಿಸುವುದು) | ಸರ್ವೋಚ್ಚ ನ್ಯಾಯಾಲಯದಲ್ಲಿರುವ ಅಂತರರಾಜ್ಯ ಜಲ ವಿವಾದಗಳು ಈ ಕೆಳಕಂಡಂತಿವೆ.<br><br>1. ಕಾವೇರಿ ಜಲ ವಿವಾದ<br>2. ಕೃಷ್ಣಾ ಜಲ ವಿವಾದ<br>3. ಮಹದಾಯಿ ಜಲ ವಿವಾದ<br>4. ಗೋದಾವರಿ ಜಲ ವಿವಾದ<br>5. ಇತರೆ ಜಲ ವಿವಾದಗಳು<br>i. ದಕ್ಷಿಣ ಪೆನ್ನಾರ್ ಜಲ ವಿವಾದ<br>ii. ಪಾಲಾರ್ ಜಲ ವಿವಾದ ಹಾಗೂ<br>iii. ಉತ್ತರ ಪೆನ್ನಾರ್ ಜಲ ವಿವಾದ<br><br>ವಿವರಗಳನ್ನು ಅನುಬಂಧ (1) ರಲ್ಲಿ ಲಗತ್ತಿಸಲಾಗಿದೆ. |
| (ಆ) | ಸದರಿ ವಿವಾದಗಳಿಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯದ ಪರವಾಗಿ ವಾದ ಮಂಡಿಸುತ್ತಿರುವ ವಕೀಲರು, ವಕೀಲರ ತಂಡ ಯಾವುದು; ಸರ್ವೋಚ್ಚ ನ್ಯಾಯಾಲಯಕ್ಕೆ ವಿವಾದ ಕೊಂಡೊಯ್ದ ದಿನಾಂಕದಿಂದ ಇದುವರೆಗಿನ ಸದರಿಯವರ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸುವುದು; | ವಿವರಗಳನ್ನು ಅನುಬಂಧ-೨(i) ಹಾಗೂ ಅನುಬಂಧ-೨(ii)ರಲ್ಲಿ ಲಗತ್ತಿಸಲಾಗಿದೆ. |
| (ಇ) | ಈ ವಿವಾದಗಳನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಸಮರ್ಪಕವಾಗಿ ಎದುರಿಸುವ ದೃಷ್ಟಿಯಿಂದ ಇದುವರೆವಿಗೆ ವಿನಿಯೋಗಿಸಲಾದ ಹಣ ಎಷ್ಟು; ವಕೀಲರು/ ವಕೀಲರ ತಂಡಕ್ಕೆ ಪಾವತಿಸಲಾದ ಶುಲ್ಕ ಎಷ್ಟು;(ಪ್ರತ್ಯೇಕವಾದ ವಿವರಗಳನ್ನು ವರ್ಷಾವಾರು ಸಂಪೂರ್ಣ ಮಾಹಿತಿಯೊಂದಿಗೆ ಒದಗಿಸುವುದು) | ವಿವರಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಲಾಗಿದೆ. |
| (ಈ) | ಅಂತರ ರಾಜ್ಯ ಜಲ ವಿವಾದಗಳಿಗೆ ಸಂಬಂಧಿಸಿದಂತೆ ಇದುವರೆವಿಗೆ ಸಾಧಿಸಿದ ಪ್ರಗತಿ ಕುರಿತು ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ?(ವಿವರ ಒದಗಿಸುವುದು) | ಹೌದು,<br><br>ಕಾವೇರಿ ನ್ಯಾಯಾಧೀಕರಣದ ತೀರ್ಪಿನಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿದ್ದ 270ಟಿಎಂಸಿ ನೀರಿನ ಪ್ರಮಾಣಕ್ಕೆ ಹೆಚ್ಚುವರಿಯಾಗಿ 14.75 ಟಿಎಂಸಿ ನೀರನ್ನು ಸರ್ವೋಚ್ಚ ನ್ಯಾಯಾಲಯದ ದಿ: 16.02.2018ರ ತೀರ್ಪಿನಲ್ಲಿ ಅವಾರ್ಡ್ ಮಾಡಲಾಗಿದ್ದು, ಇದರಿಂದಾಗಿ, ಕಾವೇರಿ ಕಣಿವೆಯನ್ನು ರಾಜ್ಯಕ್ಕೆ ಒಟ್ಟಾರೆ 284.75 ಟಿಎಂಸಿ ನೀರಿನ ಪ್ರಮಾಣವು ಲಭ್ಯವಾಗಿದೆ. |

| | | |
|---|---|---|
| | | ಮಹದಾಯಿ ನ್ಯಾಯಾಧೀಕರಣದ ತೀರ್ಪನ್ನು ಕೇಂದ್ರ ಸರ್ಕಾರವು ದಿ: 27.02.2020ರಂದು ಗೆಜೆಟ್ ಪ್ರಕಟಣೆ ಮಾಡಿದ್ದು, ಕಳಸಾ-ಬಂಡೂರಿ ಯೋಜನೆಗಳಿಗೆ ನೀರನ ಹಂಚಿಕೆಯಾಗಿದ್ದು, ಸದರಿ ಯೋಜನೆಗಳ ವಿವರವಾದ ಯೋಜನಾ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ಅಗತ್ಯವಿರುವ ತೀರುವಳಿಗಳನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆ.<br><br>ಕೃಷ್ಣಾ ನ್ಯಾಯಾಧೀಕರಣ-2 ರ ತೀರ್ಪಿನಲ್ಲಿ ರಾಜ್ಯಕ್ಕೆ 173 ಟಿಎಂಸಿ ನೀರಿನ ಹಂಚಿಕೆಯಾಗಿರುತ್ತದೆ. ಸದರಿ ನೀರಿನ ಹಂಚಿಕೆಗೆ ನೀರಾವರಿ ಯೋಜನೆಗಳನ್ನು ರೂಪಿಸಲಾಗಿದ್ದು, ನ್ಯಾಯಾಧೀಕರಣ ತೀರ್ಪು ಗೆಜೆಟ್ ಪ್ರಕಟಣೆಯಾಗಬೇಕಾಗಿದೆ.<br><br>ನ್ಯಾಯಾಧೀಕರಣದ ತೀರ್ಪನ್ನು ಗೆಜೆಟ್ ಪ್ರಕಟಣೆ ಮಾಡಲು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಿ ಕೇಂದ್ರ ಸರ್ಕಾರಕ್ಕೆ ಗೆಜೆಟ್ ಪ್ರಕಟಣೆ ಮಾಡುವಂತೆ ನಿರ್ದೇಶನ ನೀಡಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮದ್ಯಕಾಲೀನ ಅರ್ಜಿಯನ್ನು ಸಲ್ಲಿಸಲಾಗಿದೆ ಹಾಗೂ ಈ ಕುರಿತು ಕೇಂದ್ರ ಸರ್ಕಾರಕ್ಕೆ ಪತ್ರಗಳನ್ನು/ಮನವಿಗಳನ್ನು ಸಲ್ಲಿಸಲಾಗಿದೆ.<br><br>ಮಹದಾಯಿ ಹಾಗೂ ಕೃಷ್ಣಾ ಜಲ ನ್ಯಾಯಾಧೀಕರಣಗಳ ತೀರ್ಪಿನ ವಿಚಾರವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿರುವ ವಿಶೇಷ ಅನುಮತಿ ಅರ್ಜಿಗಳ ವಿಚಾರಣೆಯು ನಡೆಯಬೇಕಾಗಿದ್ದು, ಈ ಸಂಬಂಧದಲ್ಲಿ ರಾಜ್ಯಕ್ಕೆ ಸಿಗಬೇಕಾಗಿರುವ ನ್ಯಾಯಸಮ್ಮತ ನೀರಿನ ಹಂಚಿಕೆಯನ್ನು ಪಡೆಯಲು ಅಗತ್ಯವಿರುವ ಎಲ್ಲಾ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಜಸಂಇ 22 ಕಾವಿಇ 2021

**(ಗೋವಿಂದ ಎಂ.ಕಾರಜೋಳ)**
ಜಲ ಸಂಪನ್ಮೂಲ ಸಚಿವರು

## ಅನುಬಂಧ-1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1590**

| ಕ್ರಮ ಸಂಖ್ಯೆ | ಪ್ರಕರಣ/ದಾವೆ | ನ್ಯಾಯಾಲಯದಲ್ಲಿ ಪ್ರಕರಣದಾಖಲು ಮಾಡಿರುವರಾಜ್ಯ | ಕಣಿವೆ ರಾಜ್ಯಗಳು | ಪ್ರಸ್ತುತ ಹಂತ |
|---|---|---|---|---|
| 1 | 2 | 3 | 4 | 5 |
| | | **I. ಕಾವೇರಿ ಜಲ ವಿವಾದ** | | |
| 1 | ಮಿಸಲೆನಿಯಸ್ ಅಪ್ಲಿಕೇಷನ್ ಸಂಖ್ಯೆ 3127/2018 ಇನ್‌ಸಿವಿಲ್ ಅಪೀಲ್ 2453/2007 | ತಮಿಳುನಾಡು | 1. ತಮಿಳುನಾಡು<br>2. ಕರ್ನಾಟಕ<br>3. ಕೇರಳ<br>4. ಪಾಂಡಿಚೇರಿ (ಕೇಂದ್ರಾಡಳಿತ ಪ್ರದೇಶ)<br>5.ಕೇಂದ್ರ ಸರ್ಕಾರ | 1.ತಮಿಳುನಾಡು ರಾಜ್ಯವು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಅರ್ಜಿ (M.A.3127/2018) ಸಲ್ಲಿಸಿ ಕರ್ನಾಟಕಕ್ಕೆ ಮೇಕೆದಾಟು ಯೋಜನೆಯ ವಿಸ್ತೃತಾ ಯೋಜನಾ ವರದಿಯ ಸಿದ್ಧತೆಗಾಗಿ ಕೇಂದ್ರ ಸರ್ಕಾರವು ದಿ.22.11.2018 ರಂದು ನೀಡಿರುವ ಅನುಮತಿಯನ್ನು ತಡೆ ಹಿಡಿಯಬೇಕೆಂದು ಕೋರಿದೆ. ಕರ್ನಾಟಕ ರಾಜ್ಯವು ದಿನಾಂಕ 18.01.2019ರಂದು ಮೇಕೆದಾಟು ಯೋಜನೆಯ ವಿಸ್ತೃತಾಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿ ತೀರುವಳಿಗಾಗಿ ಕೋರಿದೆ.<br>2. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ದಿನಾಂಕ: 14.09.2021ರಂದು ವಿಚಾರಣೆಗಾಗಿ ಪಟ್ಟಿಯಾಗಿದೆ. |
| 2 | ಮೂಲ ದಾವೆ4/2013 | ತಮಿಳುನಾಡು | 1. ತಮಿಳುನಾಡು<br>2. ಕರ್ನಾಟಕ<br>3. ಕೇಂದ್ರಸರ್ಕಾರ | 1. 2012-13ರ ಸಾಲಿನಲ್ಲಿ, ನ್ಯಾಯಾಧಿಕರಣದ ಮಧ್ಯಂತರ ಆದೇಶದ ಅನ್ವಯ ತಮಿಳುನಾಡಿಗೆ ಹರಿಸಬೇಕಾದ ನೀರನ್ನು ಹರಿಸದಿರುವ ಕಾರಣ, ಬೆಳೆ ನಾಶ ಇತ್ಯಾದಿಗಳಿಂದ ಉಂಟಾದ ನಷ್ಟದಿಂದಾಗಿ ಕರ್ನಾಟಕ ರಾಜ್ಯವು ಪರಿಹಾರ ನೀಡಬೇಕೆಂದು ಕರ್ನಾಟಕ ರಾಜ್ಯದ ವಿರುದ್ಧ ತಮಿಳುನಾಡು ರಾಜ್ಯವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ: 04/2013ನ್ನು ದಾಖಲಿಸಿದೆ.<br>2. ಕಾವೇರಿ ಜಲ ವಿವಾದ ನ್ಯಾಯಮಂಡಲಿಯ ನಿರ್ಣಯವನ್ನು ಉದ್ದೇಶಪೂರ್ವಕವಾಗಿ ಪಾಲಿಸಿಲ್ಲವೆಂಬ ಕಾರಣಕ್ಕಾಗಿ ರೂ.1434.00 ಕೋಟಿ ಹಾಗೂ ಬೆಳೆ ಮತ್ತು ಇತರೆ ನಷ್ಟಗಳ ಪರಿಹಾರಕ್ಕಾಗಿ ರೂ.1045.70 ಕೋಟಿ ಮೊತ್ತವನ್ನು ತಮಿಳುನಾಡು ರಾಜ್ಯವು |

| ಕ್ರಮ ಸಂಖ್ಯೆ | ಪ್ರಕರಣ/ದಾವೆ | ನ್ಯಾಯಾಲಯದಲ್ಲಿ ಪ್ರಕರಣದಾಖಲು ಮಾಡಿರುವರಾಜ್ಯ | ಕಣಿವೆ ರಾಜ್ಯಗಳು | ಪ್ರಸ್ತುತ ಹಂತ |
|---|---|---|---|---|
| 1 | 2 | 3 | 4 | 5 |
| | | | | ಕ್ಲೇಮು ಮಾಡಿರುತ್ತದೆ.<br>3. ಸದರಿ ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ತಮಿಳುನಾಡಿನ ಮೂವರು ಸಾಕ್ಷಿದಾರರ ಹಾಗೂ ಕರ್ನಾಟಕ ರಾಜ್ಯದ ಒಬ್ಬ ಸಾಕ್ಷಿದಾರರ ಪಾಟಿ ಸವಾಲು ಮುಗಿದಿದೆ.<br>4. ಕರ್ನಾಟಕದ ಎರಡನೆಯ ಸಾಕ್ಷಿದಾರರಾದ ಶ್ರೀ. ವಿ.ಎಸ್. ಪ್ರಕಾಶ್ ಇವರು ಅನಾರೋಗ್ಯದ ಕಾರಣ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲ.<br>5. ಈ ಹಿನ್ನೆಲೆಯಲ್ಲಿ ಶ್ರೀ. ವಿ.ಎಸ್. ಪ್ರಕಾಶ್ ಇವರ ಶಪಥಪತ್ರವನ್ನು ಹಿಂಪಡೆಯಲು ಮತ್ತು ಶ್ರೀಯುತರ ಬದಲಾಗಿ ಶ್ರೀ ಲಕ್ಷ್ಮಣ ನಂದಗಿರಿ, Professor, Dept. of Applied Mechanics and Hydraulics, NITK-Surathkal, Mangaluru ಅವರನ್ನು ಪರಿಣಿತ ಸಾಕ್ಷಿದಾರರಾಗಿ ಪರಿಗಣಿಸಲು ಕೋರಿ ರಾಜ್ಯವು ನ್ಯಾಯಾಲಯದಲ್ಲಿ 10.12.2019ರಂದು ಮದ್ಯಕಾಲೀನ ಅರ್ಜಿಯನ್ನು ಸಲ್ಲಿಸಿದೆ.<br>6. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ದಿನಾಂಕ: 01.10.2021ರಂದು ವಿಚಾರಣೆಗಾಗಿ ಪಟ್ಟಿಯಾಗಿದೆ. |
| **II.ಕೃಷ್ಣಾ ಜಲ ವಿವಾದ** | | | | |
| 1 | **ವಿಶೇಷ ಮನವಿ ಅರ್ಜಿ- 10498/2011:**<br>28.03.2011 ರಂದು ಆಂಧ್ರ ಪ್ರದೇಶ ರಾಜ್ಯವು ದಾಖಲಿಸಿರುತ್ತದೆ (ಕೃ.ಜ.ವಿ.ನ್ಯಾ-2 ಅಂ.ರಾ.ಜ.ವಿವಾದ ಕಾಯ್ದೆ-1956ರ ಸೆಕ್ಷನ್ 5(2) ರಡಿ 30.12.2010 ರಂದು | ಆಂಧ್ರ ಪ್ರದೇಶ | 1. ಆಂಧ್ರ ಪ್ರದೇಶ<br>2. ಕರ್ನಾಟಕ<br>3. ಮಹಾರಾಷ್ಟ್ರ<br>4. ತೆಲಂಗಾಣ (ಆಂಧ್ರ ಪ್ರದೇಶ್ ಪುನರ್‌ರಚನೆಕಾಯ್ದಿ 2014ರ ನಂತರ) | 1. ಅಂತರರಾಜ್ಯ ನದಿ ಜಲ ವಿವಾದ ಕಾಯಿದೆ, 1956ರ ಸೆಕ್ಷನ್ 5(3) ರ ಅಡಿಯಲ್ಲಿ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ-2 ನೀಡುವ ಮುಂದುವರೆದ ವರದಿಯನ್ನು ಮುಂದಿನ ಆದೇಶದವರೆಗೆ ಕೇಂದ್ರ ಸರ್ಕಾರವು ಪ್ರಕಟಿಸಬಾರದೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು |

| ಕ್ರಮ ಸಂಖ್ಯೆ | ಪ್ರಕರಣ/ದಾವೆ | ನ್ಯಾಯಾಲಯದಲ್ಲಿ ಪ್ರಕರಣದಾಖಲು ಮಾಡಿರುವರಾಜ್ಯ | ಕಣಿವೆ ರಾಜ್ಯಗಳು | ಪ್ರಸ್ತುತ ಹಂತ |
|---|---|---|---|---|
| 1 | 2 | 3 | 4 | 5 |
| | ನೀಡಿರುವಅಂತಿಮಆದೇಶದ ಕುರಿತು). | | | 16.09.2011 ರಂದು ಆದೇಶಿಸಿರುತ್ತದೆ.<br>2. 16.09.2011ರಂದು ಸರ್ವೋಚ್ಛ |
| 2 | **ವಿಶೇಷ ಮನವಿ ಅರ್ಜಿ–3076–79/2014:**<br>16.01.2014 ರಂದು ಆಂಧ್ರ ಪ್ರದೇಶರಾಜ್ಯವು ದಾಖಲಿಸಿರುತ್ತದೆ (ಕೃ.ಜ.ವಿ.ನ್ಯಾ–2 ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(3) ರಡಿ 29.11.2013 ರಂದು ನೀಡಿರುವ ಮುಂದುವರೆದ ಆದೇಶದ ಕುರಿತು). | ಆಂಧ್ರ ಪ್ರದೇಶ | 1. ಆಂಧ್ರ ಪ್ರದೇಶ<br>2. ಕರ್ನಾಟಕ<br>3. ಮಹಾರಾಷ್ಟ್ರ<br>4. ತೆಲಂಗಾಣ (ಆಂಧ್ರ ಪ್ರದೇಶ್ ಪುನರ್‌ರಚನೆಕಾಯ್ದೆ 2014ರ ನಂತರ) | ನ್ಯಾಯಾಲಯವು ನೀಡಿರುವ ಮಧ್ಯಂತರಆದೇಶವನ್ನು ಮಾರ್ಪಡಿಸುವಂತೆ ಹಾಗೂ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ವು 30.12.2010ರಂದು ನೀಡಿರುವ ನಿರ್ಣಯ/ಆದೇಶ ಹಾಗೂ 29.11.2013ರಂದು ನೀಡಿರುವ ಮುಂದುವರೆದ ವರದಿಗಳನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿಕರ್ನಾಟಕ ರಾಜ್ಯವು |
| 3 | **ವಿಶೇಷ ಮನವಿ ಅರ್ಜಿ–7457–7460/2014:**<br>24.02.2014 ರಂದು ಕರ್ನಾಟಕರಾಜ್ಯವು ದಾಖಲಿಸಿರುತ್ತದೆ (ಕೃ.ಜ.ವಿ.ನ್ಯಾ–2 ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(3) ರಡಿ 29.11.2013 ರಂದು ನೀಡಿರುವ ಮುಂದುವರೆದಆದೇಶದಕುರಿತು). | ಕರ್ನಾಟಕ | 1. ಕರ್ನಾಟಕ<br>2. ಆಂಧ್ರ ಪ್ರದೇಶ<br>3. ಮಹಾರಾಷ್ಟ್ರ<br>4. ತೆಲಂಗಾಣ (ಆಂಧ್ರ ಪ್ರದೇಶ್ ಪುನರ್‌ರಚನೆಕಾಯ್ದೆ 2014ರ ನಂತರ) | ಪ್ರತ್ಯೇಕವಾಗಿ ಮಧ್ಯಂತರ ಅರ್ಜಿಯೊಂದನ್ನು ಸಲ್ಲಿಸಿರುತ್ತದೆ.<br>3. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–IIರ ವರದಿ / ಅಂತಿಮ ಆದೇಶವನ್ನು ಗೆಜೆಟ್‌ನಲ್ಲಿ ಪ್ರಕಟಿಸುವಂತೆ ಕೋರಿ ಕರ್ನಾಟಕದ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಜಲ ಸಂಪನ್ಮೂಲ ಸಚಿವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ.<br>4. ತನ್ನ ದೂರಿನಿಂದ |
| 4 | **ವಿಶೇಷ ಮನವಿ ಅರ್ಜಿ–33671/2014:**<br>25.09.2014 ರಂದುತೆಲಂಗಾಣರಾಜ್ಯವು ದಾಖಲಿಸಿರುತ್ತದೆ (ಕೃ.ಜ.ವಿ.ನ್ಯಾ–2 ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(2) ರಡಿ 30.12.2010 ರಂದು ನೀಡಿರುವ ಅಂತಿಮ ಆದೇಶದ ಕುರಿತು). | ತೆಲಂಗಾಣ | 1. ತೆಲಂಗಾಣ<br>2. ಕರ್ನಾಟಕ<br>3. ಮಹಾರಾಷ್ಟ್ರ<br>4. ಆಂಧ್ರ ಪ್ರದೇಶ | ಉದ್ಭವವಾಗುವ ಕೃಷ್ಣಾ ನದಿ ಮತ್ತು ನದಿ ಕಣಿವೆಯ ಜಲ ವಿವಾದವನ್ನು ಇತ್ಯರ್ಥಗೊಳಿಸಲು ನೂತನ ನ್ಯಾಯಾಧಿಕರಣ ರಚಿಸಿ ಅಥವಾ ಹಾಲಿ ಅಸ್ತಿತ್ವದಲ್ಲಿರುವ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ಕ್ಕೆ ತನ್ನ ದೂರನ್ನು ವಹಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ |
| 5 | **ವಿಶೇಷ ಮನವಿ ಅರ್ಜಿ–33623–26/2014:**<br>24.02.2014 | ತೆಲಂಗಾಣ | 1. ತೆಲಂಗಾಣ<br>2. ಕರ್ನಾಟಕ<br>3. ಮಹಾರಾಷ್ಟ್ರ | ಸರ್ವೋಚ್ಛ ನ್ಯಾಯಾಲಯದ ಮುಂದೆ ತೆಲಂಗಾಣ ರಾಜ್ಯವು |

| ಕ್ರಮ ಸಂಖ್ಯೆ | ಪ್ರಕರಣ/ದಾವೆ | ನ್ಯಾಯಾಲಯದಲ್ಲಿ ಪ್ರಕರಣದಾಖಲು ಮಾಡಿರುವರಾಜ್ಯ | ಕಣಿವೆ ರಾಜ್ಯಗಳು | ಪ್ರಸ್ತುತ ಹಂತ |
|---|---|---|---|---|
| 1 | 2 | 3 | 4 | 5 |
| | ರಂದುತೆಲಂಗಾಣರಾಜ್ಯವು ದಾಖಲಿಸಿರುತ್ತದೆ (ಕೃ.ಜ.ವಿ.ನ್ಯಾ–2 ಅಂ.ರಾ.ಜ.ವಿವಾದ ಕಾಯ್ದೆ–1956ರ ಸೆಕ್ಷನ್ 5(3) ರಡಿ 29.11.2013 ರಂದು ನೀಡಿರುವ ಮುಂದುವರೆದ ಆದೇಶದ ಕುರಿತು). | | 4. ಆಂಧ್ರ ಪ್ರದೇಶ | ರಿಟ್‌ಅರ್ಜಿ ಸಂ.545/2015ನ್ನು ಸಲ್ಲಿಸಿರುತ್ತದೆ.<br>5. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ವಿಚಾರಣೆ ದಿನಾಂಕವು ನಿಗಧಿಯಾಗಿರುವುದಿಲ್ಲ. |
| 6 | **ರಿಟ್ ಪಿಟಿಷನ್ (ಸಿ) ಸಂಖ್ಯೆ: 545/2015:** 10.08.2015 ರಂದು ತೆಲಂಗಾಣ ರಾಜ್ಯವು ದಾಖಲಿಸಿರುತ್ತದೆ (ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2ಕ್ಕೆ ತನ್ನ 14.07.2014ರ ದೂರನ್ನು ವಹಿಸಲು ಕೋರುತ್ತಾ ಅಥವಾ ಅಂ.ರಾ.ಜ.ವಿವಾದ ಕಾಯ್ದೆಯಡಿ ನೂತನ ನ್ಯಾಯಾಧಿಕರಣ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ) | ತೆಲಂಗಾಣ | 1. ತೆಲಂಗಾಣ<br>2. ಕರ್ನಾಟಕ<br>3. ಮಹಾರಾಷ್ಟ್ರ<br>4. ಆಂಧ್ರ ಪ್ರದೇಶ<br>5. ಕೇಂದ್ರ ಸರ್ಕಾರ | ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ದಿನಾಂಕ: 17.09.2021ರಂದು ವಿಚಾರಣೆಗಾಗಿ ಪಟ್ಟಿಯಾಗಿದೆ. |
| 7 | **ರಿಟ್ ಪಿಟಿಷನ್ (ಸಿ) ಸಂಖ್ಯೆ: 1105/2019:** ಡಾ.ಅಮೋಲ್ ಪವಾರ್ ಇವರು 26.08.2019 ರಂದು ಕೇಂದ್ರ ಸರ್ಕಾರ ಹಾಗೂ ಇತರರ ವಿರುದ್ಧ ದಾಖಲಿಸಲಾಗಿದೆ. ಕರ್ನಾಟಕ ರಾಜ್ಯವನ್ನೂ ಒಂದು ಪ್ರತಿವಾದಿಯನ್ನಾಗಿ ಮಾಡಲಾಗಿದೆ. | ಡಾ.ಅಮೋಲ್ ಪವಾರ್ | 1. ಡಾ.ಅಮೋಲ್ ಪವಾರ್<br>2. ಕೇಂದ್ರ ಸರ್ಕಾರ<br>3. ಕರ್ನಾಟಕ<br>4. ಮಹಾರಾಷ್ಟ್ರ ಹಾಗೂ ಇತರರು | 1. ಸದರಿ ರಿಟ್ ಅರ್ಜಿಯಲ್ಲಿ ಅರ್ಜಿದಾರರು "excess storage of water by all the dams on river Krishna and its tributaries in State of Maharashtra and Karnataka is in violation of said guidelines. Dams in Maharashtra has suddenly discharged huge quantity of water in the rivers after 4th August, which increased gravity and seriousness of the flood"ಎಂದು ದೂರಿರುತ್ತಾರೆ. |

| ಕ್ರಮ ಸಂಖ್ಯೆ | ಪ್ರಕರಣ/ದಾವೆ | ನ್ಯಾಯಾಲಯದಲ್ಲಿ ಪ್ರಕರಣದಾಖಲು ಮಾಡಿರುವರಾಜ್ಯ | ಕಣಿವೆ ರಾಜ್ಯಗಳು | ಪ್ರಸ್ತುತ ಹಂತ |
|---|---|---|---|---|
| 1 | 2 | 3 | 4 | 5 |
| | | | | 2. ಮಹಾರಾಷ್ಟ್ರರಾಜ್ಯದ 3 ಜಿಲ್ಲೆಗಳಲ್ಲಿ [ಸಾಂಗ್ಲಿ, ಕೊಲ್ಲಾಪುರ ಹಾಗೂ ಸತಾರಾ) ಆಗಿರುವ ಪ್ರವಾಹಕ್ಕೆಕಾರಣ ಮಹಾರಾಷ್ಟ್ರದಕೊಯ್ನಾ ಹಾಗೂ ಇತರೆ ಜಲಾಶಯಗಳಿಂದ ಬಿಡುಗಡೆ ಮಾಡಿದ ನೀರಿನ ಪ್ರಭಾವವೇ ಕಾರಣ ಎಂದು ತಿಳಿಸುತ್ತಾ, ಅಲಮಟ್ಟಿ ಜಲಾಶಯವು ಪೂರ್ಣ ಮಟ್ಟದಲ್ಲಿ ಭರ್ತಿಯಾಗಿದ್ದರೂ ಸಹ ಹಿನ್ನೀರಿನ ಪರಿಣಾಮ (back water effect) ಆಗುವುದಿಲ್ಲವೆಂದು ರಾಜ್ಯದ ಪರವಾಗಿ 16.12.2019 ರಂದು ಉತ್ತರವನ್ನು ಸರ್ವೋಚ್ಛ ನ್ಯಾಯಾಲಯದ ಮುಂದೆ ಸಲ್ಲಿಸುತ್ತಾ, ಸದರಿ ರಿಟ್‌ನ್ನು ವಜಾಗೊಳಿಸುವಂತೆ ಕರ್ನಾಟಕ ರಾಜ್ಯವು ಕೋರಿದೆ.<br><br>3. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ಮುಂದಿನ ವಿಚಾರಣೆ ದಿನಾಂಕವು ನಿಗಧಿಯಾಗಿರುವುದಿಲ್ಲ. |
| **III.ಮಹದಾಯಿ ಜಲ ವಿವಾದ** | | | | |
| 1 | **ವಿಶೇಷ ಮನವಿ ಅರ್ಜಿ– 32517/2018:** 12.11.2018 ರಂದು ಮಹಾರಾಷ್ಟ್ರ ರಾಜ್ಯವು ಸಲ್ಲಿಸಿರುತ್ತದೆ (ಮ.ಜ.ವಿ.ನ್ಯಾಯಾಧಿಕರಣವು 14.08.2018 ರಂದು ನೀಡಿರುವ ವರದಿ ಹಾಗೂ ತೀರ್ಪಿನ ವಿರುದ್ಧ) | ಮಹಾರಾಷ್ಟ್ರ | 1. ಮಹಾರಾಷ್ಟ್ರ<br>2. ಕರ್ನಾಟಕ<br>3. ಗೋವಾ | 1. ಕೇಂದ್ರ ಸರ್ಕಾರವು ದಿನಾಂಕ: 27.02.2020 ರಂದು ಮಹದಾಯಿ ಜಲ ವಿವಾದ ನ್ಯಾಯಾಧಿಕರಣದ ಆದೇಶದ ವರದಿಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿರುತ್ತದೆ.<br>2. ದಿನಾಂಕ 22.02.2021 ರಂದು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ನಿಂದನಾ ಅರ್ಜಿ 724/2020 ಹಾಗೂ ವಿಶೇಷ ಮೇಲ್ಮನವಿ ಅರ್ಜಿಗಳು ವಿಚಾರಣೆ ಬಂದಾಗ ನ್ಯಾಯಾಲಯವು"it has been agreed that in order to obviate any dispute, the Joint Monitoring Team |
| 2 | **ವಿಶೇಷ ಮನವಿ ಅರ್ಜಿ– 33018/2018:** 12.11.2018 ರಂದು ಕರ್ನಾಟಕ ರಾಜ್ಯವು ಸಲ್ಲಿಸಿರುತ್ತದೆ (ಮ.ಜ.ವಿ.ನ್ಯಾಯಾಧಿಕರಣವು 14.08.2018 ರಂದು | ಕರ್ನಾಟಕ | 1. ಕರ್ನಾಟಕ<br>2. ಗೋವಾ<br>3. ಮಹಾರಾಷ್ಟ್ರ | |

| ಕ್ರಮ ಸಂಖ್ಯೆ | ಪ್ರಕರಣ/ದಾವೆ | ನ್ಯಾಯಾಲಯದಲ್ಲಿ ಪ್ರಕರಣದಾಖಲು ಮಾಡಿರುವರಾಜ್ಯ | ಕಣಿವೆ ರಾಜ್ಯಗಳು | ಪ್ರಸ್ತುತ ಹಂತ |
|---|---|---|---|---|
| 1 | 2 | 3 | 4 | 5 |
| | ನೀಡಿರುವ ವರದಿ ಹಾಗೂ ತೀರ್ಪಿನ ವಿರುದ್ಧ) | | | which consists of the Superintending Engineers of the States of Goa, Karnataka and Maharashtra shall visit the site and submit the report in regard the alleged violation….. The above arrangement has been agreed upon in order to enable both the parties and this Court to have an expert assessment on whether the breaches which were plugged have again recurred" ಎಂದು ಆದೇಶಿಸಿದೆ. |
| 3 | **ವಿಶೇಷ ಮನವಿ ಅರ್ಜಿ-19312/2019:** 18.07.2019 ರಂದು ಗೋವಾ ರಾಜ್ಯವು ಸಲ್ಲಿಸಿರುತ್ತದೆ (ಮ.ಜ.ವಿ.ನ್ಯಾಯಾಧಿಕರಣವು 14.08.2018 ರಂದು ನೀಡಿರುವ ವರದಿ ಹಾಗೂ ತೀರ್ಪಿನ ವಿರುದ್ಧ) | ಗೋವಾ | 1. ಗೋವಾ<br>2. ಕರ್ನಾಟಕ<br>3. ಮಹಾರಾಷ್ಟ್ರ | |
| 4 | **ನಿಂದನಾಅರ್ಜಿ ಸಂಖ್ಯೆ: 724/2020** ಗೋವಾ ರಾಜ್ಯವು 6.10.2020 ರಂದು ವಿಶೇಷ ಮನವಿ ಅರ್ಜಿ ಸಂಖ್ಯೆ 19312/2019 ರಡಿ ಶ್ರೀ ಟಿ.ಎಂ. ವಿಜಯಭಾಸ್ಕರ್, ಐ.ಎ.ಎಸ್, ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಇವರ ವಿರುದ್ಧ ಸಲ್ಲಿಸಿರುತ್ತದೆ. | ಗೋವಾ | 1. ಗೋವಾ<br>2. ಶ್ರೀ ಟಿ.ಎಂ. ವಿಜಯಭಾಸ್ಕರ್, ಐ.ಎ.ಎಸ್, ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ | 3. ಮುಂದುವರೆದು ಮಾನ್ಯ ಸರ್ವೋಚ್ಛ ನ್ಯಾಯಾಲಯವು ವಿಶೇಷ ಮನವಿ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ "The contesting parties shall file written submissions to facilitate the final disposal of the proceedings. A common compilation of all the documents and other materials which the parties seek to rely on for the final hearing shall be prepared with a common index."ಎಂದು ತಿಳಿಸಿರುತ್ತದೆ.<br>4. 05.04.2021 ರಂದು ವಿಶೇಷ ಮೇಲ್ಮನವಿ ಅರ್ಜಿಗಳೊಂದಿಗೆ ನಿಂದನಾ ಅರ್ಜಿಯನ್ನು ಸಹ ಮುಂದಿನ ನಿರ್ದೇಶನಕ್ಕಾಗಿ ಪಟ್ಟಿ ಮಾಡಲು ಸರ್ವೋಚ್ಛ ನ್ಯಾಯಾಲಯವು ಆದೇಶಿಸಿದೆ.<br>5. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ದಿನಾಂಕ: 08.09.2021ರಂದು ವಿಚಾರಣೆಯನ್ನು ನಿಗಧಿಪಡಿಸಲಾಗಿದೆ. |

| | | | | |
|---|---|---|---|---|
| 5 | **ನಿಂದನಾಅರ್ಜಿ ಸಂಖ್ಯೆ: 2113/2018** ಗೋವಾ ರಾಜ್ಯವು 08.08.2018 ರಂದು ಮೂಲ ದಾವೆ ಸಂಖ್ಯೆ 4/2006 ರಡಿ ಶ್ರೀ ಟಿ.ಎಂ. ವಿಜಯಭಾಸ್ಕರ್, ಐ.ಎ.ಎಸ್, ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಇವರ ಮುಖಾಂತರ ಕರ್ನಾಟಕ ರಾಜ್ಯದ ವಿರುದ್ಧ ಸಲ್ಲಿಸಿರುತ್ತದೆ. | ಗೋವಾ | 1. ಗೋವಾ<br>2. ಕರ್ನಾಟಕ ಹಾಗೂ ಇತರರು | ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ದಿನಾಂಕ: 09.09.2021ರಂದು ವಿಚಾರಣೆಗಾಗಿ ಪಟ್ಟಿಯಾಗಿದೆ. |
| **IV.ಗೋದಾವರಿ ಜಲ ವಿವಾದ** | | | | |
| 1 | **ಮೂಲ ದಾವೆ ಸಂಖ್ಯೆ: 4/2007:** 29.07.2007 ರಂದು ಒರಿಸ್ಸಾ ರಾಜ್ಯವು ಆಂಧ್ರ ಪ್ರದೇಶ ರಾಜ್ಯದ ಪೊಲ್ಲವಾರಂ ಯೋಜನೆಯ ಹಿನ್ನೀರಿನಿಂದ ಒರಿಸ್ಸಾದ ಪ್ರದೇಶವು ಮುಳುಗಡೆಯಾಗುತ್ತದೆ ಎಂದು ಆಂಧ್ರ ಪ್ರದೇಶದ ವಿರುದ್ಧ ಸಲ್ಲಿಸಿರುತ್ತದೆ. | ಒರಿಸ್ಸಾ | 1. ಒರಿಸ್ಸಾ<br>2. ಆಂಧ್ರ ಪ್ರದೇಶ<br>3. ಕೇಂದ್ರ ಸರ್ಕಾರ<br>4. ಕರ್ನಾಟಕ<br>5. ಚತ್ತೀಸ್‌ಗಡ್<br>6. ತೆಲಂಗಾಣ (ಆಂಧ್ರ ಪ್ರದೇಶ್ ಪುನರ್‌ರಚನೆಕಾಯ್ದೆ 2014ರ ನಂತರ) | 1. ಪೊಲಾವರಂ ಯೋಜನೆಯಿಂದ ಗೋದಾವರಿ ನೀರನ್ನು ಕೃಷ್ಣಾ ಕಣಿವೆಗೆ ತಿರುವುಗೊಳಿಸುವ ಅಂಶವು ಒಳಗೊಂಡಿರುವುದರಿಂದ ಈ ದಾವೆಯಲ್ಲಿ ಕರ್ನಾಟಕ ರಾಜ್ಯವು ತಾನೇ ಸ್ವತ: ಸೇರ್ಪಡೆಗೊಂಡಿದೆ.<br>2. ಮೂಲ ದಾವೆ ಸಂಖ್ಯೆ: 4/2007 ರೊಂದಿಗೆ ಮೂಲ ದಾವೆ ಸಂಖ್ಯೆ: 1/2019 ಹಾಗೂ ಮೂಲ ದಾವೆ ಸಂಖ್ಯೆ: 3/2011 ನ್ನು ಸೇರಿಸುವಂತೆ ನ್ಯಾಯಾಲಯವು ಆದೇಶಿಸಿರುತ್ತದೆ.<br><br>3. ಮೂಲ ದಾವೆ ಸಂಖ್ಯೆ: 4/2007 11.02.2020 ರಂದು ವಿಚಾರಣೆಗಾಗಿ ಬಂದಾಗ, ಸರ್ವೋಚ್ಛ ನ್ಯಾಯಾಲಯವು ಕೆಳಕಂಡಂತೆ ಆದೇಶಿಸಿರುತ್ತದೆ– "List the matter on Tuesday, the 7th April,2020"<br><br>4. ಆದರೆ ಸದರಿ ದಾವೆಯು07.04.2020ರಂದು ಪಟ್ಟಿಯಾಗಿರುವುದಿಲ್ಲ.<br><br>5. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ಮುಂದಿನ ವಿಚಾರಣೆ ದಿನಾಂಕವು ನಿಗಧಿಯಾಗಿರುವುದಿಲ್ಲ. |
| 2 | **ಮೂಲ ದಾವೆ ಸಂಖ್ಯೆ: 1/2019:** 25.02.2019 ರಂದು ತೆಲಂಗಾಣ ರಾಜ್ಯವು ಕೇಂದ್ರ ಸರ್ಕಾರ ಹಾಗೂ ಇತರರ ವಿರುದ್ಧ ಪೊಲ್ಲವಾರಂ ಯೋಜನೆ ಕುರಿತು ಸಲ್ಲಿಸಿರುತ್ತದೆ. ಸದರಿ ವಿಷಯವನ್ನು ಮೂಲ ದಾವೆ ಸಂಖ್ಯೆ: 4/2007 ರೊಂದಿಗೆ ಸೇರಿಸಲಾಗಿದೆ. | ತೆಲಂಗಾಣ | 1. ತೆಲಂಗಾಣ<br>2. ಕೇಂದ್ರ ಸರ್ಕಾರ<br>3. ಆಂಧ್ರ ಪ್ರದೇಶ<br>4. ಕರ್ನಾಟಕ<br>5. ಚತ್ತೀಸ್‌ಗಡ್<br>6. ಒರಿಸ್ಸಾ<br>7. ಮಹಾರಾಷ್ಟ್ರ | |

## V. ಇತರೆ ಜಲ ವಿವಾದಗಳು

### i) ದಕ್ಷಿಣ ಪೆನ್ನಾರ್ ಜಲ ವಿವಾದ

| | | | | |
|---|---|---|---|---|
| | ಮೂಲ ದಾವೆ 1/2018: | ತಮಿಳುನಾಡು | 1. ತಮಿಳುನಾಡು<br>2. ಕರ್ನಾಟಕ<br>3. ಕೇಂದ್ರ ಸರ್ಕಾರ | 1. ತಮಿಳುನಾಡು ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ 18.05.2018ರಂದು ದಾಖಲಿಸಿರುವ ಮೂಲ ದಾವೆ ಸಂಖ್ಯೆ: 1/2018 ರಲ್ಲಿ ಕರ್ನಾಟಕರಾಜ್ಯವು ಪೊನ್ನಯಾರ್ (ಕರ್ನಾಟಕದಲ್ಲಿ ದಕ್ಷಿಣ ಪೆನ್ನಾರ್‌ಕಣಿವೆ) ಕಣಿವೆಯಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳು 1892ರ ಒಪ್ಪಂದದ ಉಲ್ಲಂಘನೆ ಎಂದು ಆಕ್ಷೇಪಿಸಿ ಹಾಗೂ ಇದರಿಂದ ತಮಿಳುನಾಡಿನ ಒಳಹರಿವಿಗೆ ಹಾನಿಯಾಗುತ್ತದೆ ಎಂದು ಆಪಾದಿಸಿದೆ.<br><br>2.ಕೋಲಾರ, ಬಂಗಾರ ಪೇಟೆ, ಮಾಲೂರು ಮತ್ತು ಮಾರ್ಗ ಮಧ್ಯದ ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಉದ್ದೇಶಿಸಿರುವ ಮಾರ್ಕಾಂಡೇಯ ನದಿ ಕುಡಿಯುವ ನೀರು ಸರಬರಾಜು ಯೋಜನೆಗೆ ತಡೆ ಕೋರಿ, ಮೇಲಿನ ದಾವೆಯ ಅಡಿಯಲ್ಲಿ ತಮಿಳುನಾಡು ರಾಜ್ಯವು ಮಧ್ಯಕಾಲೀನ ಅರ್ಜಿ ಸಂ.95384/2019ನ್ನು ಸಲ್ಲಿಸಿರುತ್ತದೆ.<br><br>3.ಮೂಲ ದಾವೆ ಸಂ. 1/2018 ಅಡಿಯಲ್ಲಿನ ಮಧ್ಯಕಾಲೀನ ಅರ್ಜಿ ಸಂ.95384/2019ನ್ನು ಸರ್ವೋಚ್ಚ ನ್ಯಾಯಾಲಯವು14.11.2019ರಂದು ವಜಾಗೊಳಿಸಿ ತೀರ್ಪನ್ನು ಹೊರಡಿಸಿದೆ. ನ್ಯಾಯಾಧಿಕರಣ ರಚನೆಗಾಗಿ ಅಂತರರಾಜ್ಯ ನದಿ ಜಲ ವಿವಾದಕಾಯಿದೆ, 1956ರಡಿ ದೂರನ್ನು ದಾಖಲಿಸುವ ಮೂಲಕ ಕೇಂದ್ರ ಸರ್ಕಾರವನ್ನು ಸಂಪರ್ಕಿಸಲು ತಮಿಳುನಾಡಿಗೆ ಸರ್ವೋಚ್ಚ ನ್ಯಾಯಾಲಯವು ನಿರ್ದೇಶಿಸಿತು. |

| | | | | |
|---|---|---|---|---|
| | | | | 4.ಕೇಂದ್ರ ಸರ್ಕಾರದಿಂದ ನ್ಯಾಯಾಧಿಕರಣ ರಚನೆ ಆಗುವವರೆಗೆ ಪೆನ್ನಯ್ಯಾರ್ ಕಣಿವೆಯಲ್ಲಿ ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳದಂತೆ ಕರ್ನಾಟಕ ರಾಜ್ಯಕ್ಕೆ ನಿರ್ದೇಶನ ನೀಡುವಂತೆ ಕೋರಿತಮಿಳುನಾಡು ರಾಜ್ಯವು ದಿನಾಂಕ: 16.12.2019 ರಂದು ಮೂಲ ದಾವೆ ಸಂಖ್ಯೆ: 1/2018 ರಡಿಯಲ್ಲಿ ಮತ್ತೊಂದು ಮಧ್ಯಕಾಲೀನ ಅರ್ಜಿ ಸಂ. 193417/2019ನ್ನು ದಾಖಲಿಸಿದೆ.<br><br>5. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ದಿನಾಂಕ: 14.09.2021ರಂದು ವಿಚಾರಣೆಗಾಗಿ ಪಟ್ಟಿಯಾಗಿದೆ. |
| **ii)** ಪಾಲರ್ ಜಲ ವಿವಾದ | | | | |
| | ಮೂಲ ದಾವೆ 3/2016: | ತಮಿಳುನಾಡು | 1.ತಮಿಳುನಾಡು<br>2.ಆಂಧ್ರ ಪ್ರದೇಶ<br>2.ಕರ್ನಾಟಕ<br>3.ಕೇಂದ್ರ ಸರ್ಕಾರ | 1. ಪಾಲಾರ್ ನದಿ ಕಣಿವೆಯಲ್ಲಿ ಆಂದ್ರಪ್ರದೇಶ ರಾಜ್ಯವು, ಪಾಲಾರ್ ನದಿಗೆ ಅಡ್ಡಲಾಗಿ ಅಸ್ತಿತ್ವದಲ್ಲಿರುವ ಚೆಕ್ ಡ್ಯಾಂಗಳ ಎತ್ತರ ಹೆಚ್ಚಿಸುವ ಹಾಗೂ ಹೊಸದಾಗಿ ಕೈಗೊಳ್ಳುತ್ತಿರುವ ಚೆಕ್ ಡ್ಯಾಂಗಳನ್ನು ಆಕ್ಷೇಪಿಸಿ ತಮಿಳುನಾಡು ರಾಜ್ಯವು ಆಂದ್ರಪ್ರದೇಶ ರಾಜ್ಯದ ವಿರುದ್ಧ ಮೂಲ ದಾವೆ ಸಂಖ್ಯೆ: 3/2016 ನ್ನು ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಿಸಿದೆ. ಕರ್ನಾಟಕವನ್ನು ಈ ದಾವೆಯಲ್ಲಿ ಎರಡನೆಯ ಪ್ರತಿವಾದಿ-ಯನ್ನಾಗಿಸಿದೆ.<br>2. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ದಿನಾಂಕ: 21.09.2021ರಂದು ವಿಚಾರಣೆಗಾಗಿ ಪಟ್ಟಿಯಾಗಿದೆ. |

| iii) ಉತ್ತರ ಪೆನ್ನಾರ್ ಜಲ ವಿವಾದಗಳು | | | | |
|---|---|---|---|---|
| | **ಮೂಲ ದಾವೆ ಸಂಖ್ಯೆ: 5/2003:** 14.05.2003 ರಂದುಆಂಧ್ರ ಪ್ರದೇಶರಾಜ್ಯವು ಪರಗೋಡು ಹಾಗೂ ಇತರೆ ಸಣ್ಣ ನೀರಾವರಿಯೋಜನೆಗಳನ್ನುಕರ್ನಾಟಕರಾಜ್ಯವುಕೈಗೆತ್ತಿಕೊಂಡಿರುವುದನ್ನುಆಕ್ಷೇಪಿಸಿ ಕರ್ನಾಟಕರಾಜ್ಯದ ವಿರುದ್ಧ ಸಲ್ಲಿಸಿರುತ್ತದೆ. | ಆಂಧ್ರ ಪ್ರದೇಶ | 1. ಆಂಧ್ರ ಪ್ರದೇಶ<br>2. ಕರ್ನಾಟಕ<br>3. ಕೇಂದ್ರ ಸರ್ಕಾರ | 1. ಕರ್ನಾಟಕರಾಜ್ಯ ಹಾಗೂ ಕೇಂದ್ರ ಸರ್ಕಾರವನ್ನು ಪ್ರತಿವಾದಿಗಳನ್ನಾಗಿಸಿ ಆಂಧ್ರ ಪ್ರದೇಶ ರಾಜ್ಯವು ಸರ್ವೋಚ್ಛ ನ್ಯಾಯಾಲಯದ ಮುಂದೆ ದಿನಾಂಕ 14.05.2003 ರಂದು ಮೂಲದಾವೆ ಸಂಖ್ಯೆ 5/2003 ಅನ್ನು ದಾಖಲಿಸಿರುತ್ತದೆ.<br><br>2. ಸದರಿ ದಾವೆಯು ಕರ್ನಾಟಕರಾಜ್ಯವು ಉತ್ತರ ಪೆನ್ನಾರ್ ನದಿ ಕಣಿವೆಯಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳ ಹಾಗೂ ಕುಡಿಯುವ ನೀರಿನ ಯೋಜನೆಗಳ ವಿರುದ್ಧವಾಗಿರುತ್ತದೆ. ಈ ಯೋಜನೆಗಳನ್ನು ರಾಜ್ಯವು ಕೈಗೊಳ್ಳದಂತೆ ತಡೆಯಾಜ್ಞೆ ನೀಡುವಂತೆ ಕೋರಿರುತ್ತದೆ. ಸದರಿ ಯೋಜನೆಗಳ ನಿರ್ಮಾಣವನ್ನು ಸರ್ವೋಚ್ಛ ನ್ಯಾಯಾಲಯವು ತಡೆದಿರುವುದಿಲ್ಲ.<br><br>3. ಕರ್ನಾಟಕ ರಾಜ್ಯವು ಎಲ್ಲಾ ಅವಶ್ಯಕ ದಾಖಲೆಗಳನ್ನು ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಿಸಿರುತ್ತದೆ.<br><br>4. ಆಂಧ್ರ ಪ್ರದೇಶವು ಇಬ್ಬರು ಪರಿಣಿತ ಸಾಕ್ಷಿದಾರ ಹಾಗೂ ಕರ್ನಾಟಕವು ಮೂರು ಪರಿಣಿತ ಸಾಕ್ಷಿದಾರರ ಸಾಕ್ಷಿಯನ್ನು ಸಾದರಪಡಿಸಿವೆ. ಸಾಕ್ಷಿದಾರರ ಪಾಟೀಸವಾಲು ಪೂರ್ಣಗೊಂಡಿದೆ.<br><br>5. ಸರ್ವೋಚ್ಚ ನ್ಯಾಯಾಲಯದ ಅಂತರ್ಜಾಲದಿಂದ ಪಡೆದ ಮಾಹಿತಿಯಂತೆ ಮುಂದಿನ ವಿಚಾರಣೆ ದಿನಾಂಕ ನಿಗಧಿಯಾಗಿರುವುದಿಲ್ಲ. |

## ಅನುಬಂಧ-2(i)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1590**

| ಕ್ರ.ಸಂ | ಜಲ ವಿವಾದಗಳು/ದಾವೆಗಳು | ಕಾನೂನು ತಂಡ |
|---|---|---|
| I. | **ಕಾವೇರಿ ಜಲ ವಿವಾದ:**<br>1. ಮಿಸಲೆನಿಯೆಸ್ಅಪ್ಲಿಕೇಷನ್ ಸಂಖ್ಯೆ 3127/2018 (ಸಿವಿಲ್ ಅಪೀಲ್ 2453/2007ರಡಿ).<br>2. ಮೂಲ ದಾವೆ ಸಂಖ್ಯೆ:4/2013 | ಶ್ರೀಯುತರು<br>1) ಅಡ್ವೋಕೇಟ್‌ಜನರಲ್<br>2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು<br>3) ಎಸ್.ಎಸ್.ಜವಳಿ, ಹಿರಿಯ ವಕೀಲರು<br>4) ಶ್ಯಾಂದಿವಾನ್, ಹಿರಿಯ ವಕೀಲರು<br>5) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು<br>6) ಎಸ್.ಸಿ.ಶರ್ಮಾ, ವಕೀಲರು<br>7) ಆರ್.ಎಸ್.ರವಿ, ವಕೀಲರು.<br>8) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ |
| II. | **ಕೃಷ್ಣಾ ಜಲ ವಿವಾದ:**<br>1) ವಿಶೇಷ ಮನವಿ ಅರ್ಜಿ:10498/2011<br>2) ವಿಶೇಷ ಮನವಿ ಅರ್ಜಿ:3076-79/2019<br>3) ವಿಶೇಷ ಮನವಿ ಅರ್ಜಿ:7457-7460/2014<br>4) ವಿಶೇಷ ಮನವಿ ಅರ್ಜಿ:33671/2014<br>5) ವಿಶೇಷ ಮನವಿ ಅರ್ಜಿ:33623-26/2014<br>6) ರಿಟ್ ಪಿಟಿಷನ್ (ಸಿವಿಲ್) ಸಂ:545/2015.<br>7) ರಿಟ್ ಪಿಟಿಷನ್ (ಸಿವಿಲ್) ಸಂ:1105/2019 | ಶ್ರೀಯುತರು<br>1) ಅಡ್ವೋಕೇಟ್‌ಜನರಲ್<br>2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು<br>3) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು<br>4) ಶ್ಯಾಂದಿವಾನ್, ಹಿರಿಯ ವಕೀಲರು<br>5) ಎಸ್.ಸಿ.ಶರ್ಮಾ, ವಕೀಲರು<br>6) ರಾಜೇಶ್ವರ್.ಪಿ.ಎನ್. ವಕೀಲರು<br>7) ಅಶ್ವಿನ್ ಚಿಕ್‌ಮಠ್, ವಕೀಲರು<br>8) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ |
| III. | **ಮಹದಾಯಿ ಜಲ ವಿವಾದ:**<br>1) ವಿಶೇಷ ಮನವಿ ಅರ್ಜಿ:32517/2018:<br>2) ವಿಶೇಷ ಮನವಿ ಅರ್ಜಿ:33018/2018:<br>3) ವಿಶೇಷ ಮನವಿ ಅರ್ಜಿ:19312/2019<br>4) ನಿಂದನಾಅರ್ಜಿ ಸಂಖ್ಯೆ: 724/2020 (ಗೋವಾ ರಾಜ್ಯವು06.10.2020 ರಂದು ವಿಶೇಷ ಮನವಿ ಅರ್ಜಿ ಸಂಖ್ಯೆ 19312/2019ರಡಿ ದಾಖಲಿಸಿದೆ).<br>5) ನಿಂದನಾಅರ್ಜಿ ಸಂಖ್ಯೆ:2113/2018 (ಗೋವಾ ರಾಜ್ಯವು08.08.2018ರಂದುಮೂಲ ದಾವೆ ಸಂಖ್ಯೆ:4/2006ರಡಿ ದಾಖಲಿಸಿದೆ). | ಶ್ರೀಯುತರು<br>1) ಅಡ್ವೋಕೇಟ್‌ಜನರಲ್<br>2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು<br>3) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು<br>4) ಶ್ಯಾಂದಿವಾನ್, ಹಿರಿಯ ವಕೀಲರು<br>5) ನಿಶಾಂತ್ ಪಾಟೀಲ್, ಅಡ್ವೋಕೇಟ್-ಆನ್-ರೆಕಾರ್ಡ್<br>6) ರಾಜೇಶ್ವರ್.ಪಿ.ಎನ್. ವಕೀಲರು<br>7) ಅಶ್ವಿನ್ ಚಿಕ್‌ಮಠ್, ವಕೀಲರು.<br>8) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್<br>9) ಎಂ.ಬಿ.ಜಿರಾಲಿ |
| IV. | **ಗೋದಾವರಿ ಜಲ ವಿವಾದ:**<br>1) ಮೂಲ ದಾವೆ ಸಂಖ್ಯೆ:4/2007<br>2) ಮೂಲ ದಾವೆ ಸಂಖ್ಯೆ:1/2019<br>3) ಮೂಲ ದಾವೆ ಸಂಖ್ಯೆ:3/2011(ಸರ್ವೋಚ್ಚ ನ್ಯಾಯಾಲಯದಆದೇಶ ದಿನಾಂಕ23.08.2019 ರಂತೆಮೂಲ ದಾವೆ ಸಂಖ್ಯೆ 1/2019 ಮತ್ತು ಮೂಲ ದಾವೆ ಸಂಖ್ಯೆ3/2011ನ್ನು ಮೂಲ ದಾವೆ ಸಂಖ್ಯೆ 4/2007 ರೊಂದಿಗೆ ಸೇರಿಸಿ ಪಟ್ಟಿ ಮಾಡುವಂತೆ ಆದೇಶಿಸಿದೆ). | ಶ್ರೀಯುತರು<br>1) ಅಡ್ವೋಕೇಟ್‌ಜನರಲ್<br>2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು<br>3) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು<br>4) ಎಸ್.ಸಿ.ಶರ್ಮಾ, ವಕೀಲರು<br>5) ವಿ.ಎನ್.ರಘುಪತಿ,ಅಡ್ವೋಕೇಟ್-ಆನ್-ರೆಕಾರ್ಡ್ |

| ಕ್ರ.ಸಂ | ಜಲ ವಿವಾದಗಳು/ದಾವೆಗಳು | ಕಾನೂನು ತಂಡ |
|---|---|---|
| V. ಇತರೆ ಜಲ ವಿವಾದಗಳು: | | |
| | 1) ದಕ್ಷಿಣ ಪೆನ್ನಾರ್ ಜಲ ವಿವಾದಗಳು<br>ಮೂಲ ದಾವೆ ಸಂಖ್ಯೆ:1/2018 | ಶ್ರೀಯುತರು<br>1) ಶ್ಯಾಂ ದಿವಾನ್, ಹಿರಿಯ ವಕೀಲರು<br>2). ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ |
| | 2) ಪಾಲಾರ್ ಜಲ ವಿವಾದಗಳು<br>ಮೂಲ ದಾವೆ ಸಂಖ್ಯೆ:3/2016 | ಶ್ರೀಯುತರು<br>1) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು<br>2) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ |
| | 3) ಉತ್ತರ ಪೆನ್ನಾರ್ ಜಲ ವಿವಾದಗಳು<br>ಮೂಲ ದಾವೆ ಸಂಖ್ಯೆ:5/2003 | ಶ್ರೀಯುತರು<br>1) ಅಡ್ವೋಕೇಟ್‌ಜನರಲ್<br>2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು<br>3) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು<br>4) ಎಸ್.ಸಿ.ಶರ್ಮಾ, ವಕೀಲರು<br>5) ವಿ.ಎನ್.ರಘುಪತಿ,ಅಡ್ವೋಕೇಟ್-ಆನ್-ರೆಕಾರ್ಡ್ |

ಅನುಬಂಧ 2(ii)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1590**

| ಕ್ರ.ಸಂ | ಜಲ ವಿವಾದ | ಕಾನೂನು ತಂಡ | ಇಂದ | ವರೆಗೆ |
|---|---|---|---|---|
| | | **I. ಕಾವೇರಿ ಜಲ ವಿವಾದ** | | |
| | 1. ಮಿಸಲೆನಿಯೆಸ್‌ಅಪ್ಲಿಕೇಷನ್ ಸಂಖ್ಯೆ:3127/2018 ಇನ್‌ಸಿವಿಲ್ ಅಪೀಲ್ 2453/2007. | ಶ್ರೀಯುತರು<br>1) ಅಡ್ವೋಕೇಟ್‌ಜನರಲ್ | 2017-18 ರಿಂದ | |
| | | 2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು | 2017-18 ರಿಂದ | |
| | | 3) ಎಸ್.ಎಸ್.ಜವಳಿ, ಹಿರಿಯ ವಕೀಲರು | 2017-18 ರಿಂದ | |
| | | 4) ಶ್ಯಾಂದಿವಾನ್, ಹಿರಿಯ ವಕೀಲರು | 2017-18 ರಿಂದ | |
| | | 5) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು | 2017-18 ರಿಂದ | |
| | | 6) ಎಸ್.ಸಿ.ಶರ್ಮಾ, ವಕೀಲರು | 2017-18 ರಿಂದ | |
| | | 7) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ | 2017-18 ರಿಂದ | |
| | | 8) ಆರ್.ಎಸ್.ರವಿ, ವಕೀಲರು | 2017-18 ರಿಂದ | |
| | 2. ಮೂಲ ದಾವೆ:4/2013 | ಶ್ರೀಯುತರು<br>1) ಅಡ್ವೋಕೇಟ್‌ಜನರಲ್ | 2013-14 ರಿಂದ | |
| | | 2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು | 2013-14 ರಿಂದ | |
| | | 3) ಎಸ್.ಎಸ್.ಜವಳಿ, ಹಿರಿಯ ವಕೀಲರು | 2013-14 ರಿಂದ | |
| | | 4) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು | 2013-14 ರಿಂದ | |
| | | 5) ಎಸ್.ಸಿ.ಶರ್ಮಾ, ವಕೀಲರು | 2013-14 ರಿಂದ | |
| | | 6) ಬ್ರಿಜೇಶ್ ಕಾಳಪ್ಪ, ವಕೀಲರು | 2017-18 | 2019-20 |
| | | 7) ರಣವೀರ್ ಸಿಂಗ್, ವಕೀಲರು | 2017-18 | 2019-20 |
| | | 8) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ | 2013-14 ರಿಂದ | 2020-21 |
| | | 9) ಆರ್.ಎಸ್.ರವಿ, ವಕೀಲರು | 2014-15 ರಿಂದ | |
| | | 10) ಜೆ.ಎಂ.ಗಂಗಾಧರ್, ವಕೀಲರು | 2014-15 | 2019-20 |
| | | 11) ಅಬ್ದುಲ್‌ಅಜೀಮ್ ಕಲಬುಡ್ಗೆ, ವಕೀಲರು | 2016-17 | 2019-20 |
| | | **II. ಕೃಷ್ಣಾ ಜಲ ವಿವಾದ** | | |
| | 1) ಎಸ್.ಎಲ್.ಪಿ. ನಂ:10498/2011<br>2) ಎಸ್.ಎಲ್.ಪಿ.ನಂ:3076-79/2019<br>3) ಎಸ್.ಎಲ್.ಪಿ.ನಂ:7457-7460/2014<br>4) ಎಸ್.ಎಲ್.ಪಿ.ನಂ:33671/2014<br>5) | ಶ್ರೀಯುತರು<br>1) ಅಡ್ವೋಕೇಟ್‌ಜನರಲ್ | 2011-12 ರಿಂದ | |
| | | 2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು | 2011-12 ರಿಂದ | |
| | | 3) ಅನಿಲ್.ಬಿ.ದಿವಾನ್ (ದಿವಂಗತ). ಹಿರಿಯ ವಕೀಲರು | 2011-12 | 2017-18 |
| | | 4) ಎಸ್.ಎಸ್.ಜವಳಿ, ವಕೀಲರು | 2011-12 | 2019-20 |
| | | 5) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು | 2011-12 ರಿಂದ | |
| | | 6) ಶ್ಯಾಂ ದಿವಾನ್, ಹಿರಿಯ ವಕೀಲರು | 2019-20 ರಿಂದ | |
| | | 7) ಎಸ್.ಸಿ.ಶರ್ಮಾ, ವಕೀಲರು | 2011-12 ರಿಂದ | |
| | | 8) ಬ್ರಿಜೇಶ್ ಕಾಳಪ್ಪ, ವಕೀಲರು | 2011-12 | 2019-20 |
| | | 9) ರಣವೀರ್ ಸಿಂಗ್, ವಕೀಲರು | 2011-12 | 2019-20 |
| | | 10) ಗುರುದತ್ ಅಂಕೋಲೇಕರ್, ವಕೀಲರು | 2011-12 | 2019-20 |
| | | 11) ರಾಜೇಶ್ವರ್.ಪಿ.ಎನ್, ವಕೀಲರು | 2019-20 ರಿಂದ | |

| ಕ್ರ.ಸಂ | ಜಲ ವಿವಾದ | ಕಾನೂನು ತಂಡ | ಇಂದ | ವರೆಗೆ |
|---|---|---|---|---|
| | ಎಸ್.ಎಲ್.ಪಿ.ನಂ:336 23-26/2014<br>6) ರಿಟ್ ಪೆಟಿಷನ್(ಸಿವಿಲ್) ನಂ:545/2015.<br>7) ರಿಟ್ ಪೆಟಿಷನ್ (ಸಿವಿಲ್) ನಂ:1105/2019 | 12) ಅಶ್ವಿನ್ ಚಿಕ್‌ಮತ್, ವಕೀಲರು | 2019-20 ರಿಂದ | |
| | | 13) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ | 2011-12 ರಿಂದ | |
| | | **III. ಮಹದಾಯಿ ಜಲ ವಿವಾದ** | | |
| | 1) ವಿಶೇಷ ಮನವಿ ಅರ್ಜಿ- ಸಂ:32517/2018:<br>2) ವಿಶೇಷ ಮನವಿ ಅರ್ಜಿ- ಸಂ:33018/2018:<br>3) ವಿಶೇಷ ಮನವಿ ಅರ್ಜಿ- ಸಂ:19312/2019<br>4) ನಿಂದನಾ ಅರ್ಜಿಸಂಖ್ಯೆ: 724/2020 (ಗೋವಾ ರಾಜ್ಯವು 06.10.2020 ರಂದು ವಿಶೇಷ ಮನವಿ ಅರ್ಜಿ ಸಂಖ್ಯೆ 19312/2019).<br>5) ನಿಂದನಾಅರ್ಜಿ ಸಂಖ್ಯೆ:2113/2018 (ಮೂಲ ದಾವೆ ಸಂಖ್ಯೆ:4/2006 ರಲ್ಲಿ) | ಶ್ರೀಯುತರು<br>1) ಅಡ್ವೋಕೇಟ್‌ಜನರಲ್ | 2018-19 ರಿಂದ | |
| | | 2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು | 2018-19 ರಿಂದ | |
| | | 3) ಅನಿಲ್.ಬಿ.ದಿವಾನ್ (ದಿವಂಗತ), ಹಿರಿಯ ವಕೀಲರು | 2018-19 | 2018-19 |
| | | 4) ಎಸ್.ಎಸ್.ಜವಳಿ, ವಕೀಲರು | 2018-19 | 2019-20 |
| | | 5) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು | 2018-19 ರಿಂದ | |
| | | 6) ಶ್ಯಾಂ ದಿವಾನ್, ಹಿರಿಯ ವಕೀಲರು | 2019-20 ರಿಂದ | |
| | | 7) ಎಸ್.ಸಿ.ಶರ್ಮಾ, ವಕೀಲರು | 2018-19 | 2020-21 |
| | | 8) ಬ್ರಿಜೇಶ್ ಕಾಳಪ್ಪ, ವಕೀಲರು | 2018-19 | 2019-20 |
| | | 9) ಅನಿತಾ ಶೆಣೈ, ವಕೀಲರು | 2018-19 | 2019-20 |
| | | 10) ಎಂ.ಬಿ.ಜಿರಾಲಿ, ವಕೀಲರು | 2018-19 | 2019-20 |
| | | 11) ನಿಶಾಂತ್ ಪಾಟೀಲ್, ವಕೀಲರು | 2018-19 ರಿಂದ | |
| | | 12) ಕಾಶಿ ವಿಶ್ವೇಶ್ವರ್, ವಕೀಲರು | 2018-19 | 2019-20 |
| | | 13) ರಣವೀರ್ ಸಿಂಗ್, ವಕೀಲರು | 2018-19 | 2019-20 |
| | | 14) ರಾಜೇಶ್ವರ್.ಪಿ.ಎನ್, ವಕೀಲರು | 2018-19 ರಿಂದ | |
| | | 15) ಅಶ್ವಿನ್ ಚಿಕ್‌ಮತ್, ವಕೀಲರು | 2018-19 ರಿಂದ | |
| | | 16) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ | 2018-19 ರಿಂದ | |
| | | **IV. ಗೋದಾವರಿ ಜಲ ವಿವಾದ** | | |
| | 1) ಮೂಲ ದಾವೆ ಸಂಖ್ಯೆ:4/2007<br>2) ಮೂಲ ದಾವೆ ಸಂಖ್ಯೆ:1/2019<br>3) ಮೂಲ ದಾವೆಸಂಖ್ಯೆ:3/2011(ಸವೋರ್ಚ್ಚ ನ್ಯಾಯಾಲಯದಆದೇಶ ದಿನಾಂಕ:23.08.2019 ರಂತೆ ಮೂಲ ದಾವೆ ಸಂಖ್ಯೆ: 1/2019 ಮತ್ತು ಮೂಲ ದಾವೆ ಸಂಖ್ಯೆ:. 3/2011ನ್ನು ಮೂಲ ದಾವೆ ಸಂಖ್ಯೆ:4/2007 ರೊಂದಿಗೆ | ಶ್ರೀಯುತರು<br>1) ಅಡ್ವೋಕೇಟ್‌ಜನರಲ್ | 2007-08 ರಿಂದ | |
| | | 2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು | 2007-08 ರಿಂದ | |
| | | 3) ಎಸ್.ಎಸ್.ಜವಳಿ, ವಕೀಲರು | 2007-08 | 2019-20 |
| | | 4) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು | 2007-08 ರಿಂದ | |
| | | 5) ಎಸ್.ಸಿ.ಶರ್ಮಾ, ವಕೀಲರು | 2007-08 ರಿಂದ | |
| | | 6) ಬ್ರಿಜೇಶ್ ಕಾಳಪ್ಪ, ವಕೀಲರು | 2007-08 | 2019-20 |
| | | 7) ವಿ.ಎನ್.ರಘುಪತಿ, ಅಡ್ವೋಕೇಟ್-ಆನ್-ರೆಕಾರ್ಡ್ | 2007-08 ರಿಂದ | |
| | | 8) ಗುರುದತ್‌ಅಂಕೋಲೇಕರ್, ವಕೀಲರು | 2007-08 | 2019-20 |

| ಕ್ರ.ಸಂ | ಜಲ ವಿವಾದ | ಕಾನೂನು ತಂಡ | ಇಂದ | ವರೆಗೆ |
|---|---|---|---|---|
| | ಸೇರಿಸಿ ಪಟ್ಟಿ ಮಾಡುವಂತೆ ಆದೇಶಿಸಿದೆ). | | | |
| | **V. ಇತರೆ ಜಲ ವಿವಾದಗಳು** | | | |
| | **1.ದಕ್ಷಿಣ ಪೆನ್ನಾರ್ ಜಲ ವಿವಾದಗಳು** ಮೂಲ ದಾವೆ ಸಂಖ್ಯೆ:1/2018 | ಶ್ರೀಯುತರು<br>1) ಶ್ಯಾಂ ದಿವಾನ್, ಹಿರಿಯ ವಕೀಲರು | 2019-20 | 2020-21 |
| | | 2) ವಿ.ಎನ್.ರಘುಪತಿ, ಅಡ್ವೋಕೇಟ್–ಆನ್–ರೆಕಾರ್ಡ್ | 2017-18 | 2020-21 |
| | **2.ಪಾಲಾರ್ ಜಲ ವಿವಾದಗಳು** ಮೂಲ ದಾವೆ ಸಂಖ್ಯೆ:3/2016 | ಶ್ರೀಯುತರು<br>1) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು<br>2) ವಿ.ಎನ್.ರಘುಪತಿ, ಅಡ್ವೋಕೇಟ್–ಆನ್–ರೆಕಾರ್ಡ್ | 2019-20<br>2016-17 | 2020-21<br>2020-21 |
| | **3.ಉತ್ತರ ಪೆನ್ನಾರ್ ಜಲ ವಿವಾದಗಳು** ಮೂಲ ದಾವೆ ಸಂಖ್ಯೆ:5/2003 | ಶ್ರೀಯುತರು<br>1) ಅಡ್ವೋಕೇಟ್‌ಜನರಲ್ | 2003-04 | 2020-21 |
| | | 2) ಎಫ್.ಎಸ್.ನಾರಿಮನ್, ಹಿರಿಯ ವಕೀಲರು | 2003-04 | 2020-21 |
| | | 3) ಎಸ್.ಎಸ್.ಜವಳಿ, ವಕೀಲರು | 2003-04 | 2019-20 |
| | | 4) ಮೋಹನ್.ವಿ.ಕಾತರ್ಕಿ, ಹಿರಿಯ ವಕೀಲರು | 2003-04 | 2020-21 |
| | | 5) ಎಸ್.ಸಿ.ಶರ್ಮಾ, ವಕೀಲರು | 2003-04 | 2020-21 |
| | | 6) ವಿ.ಎನ್.ರಘುಪತಿ, ವಕೀಲರು | 2003-04 | 2020-21 |

## ಅನುಬಂಧ-3

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1590**

| ಕ್ರ.ಸಂ | ವರ್ಷ | ಕಾನೂನು ತಂಡದವೆಚ್ಚದ ವಿವರ (ರೂ.ಗಳಲ್ಲಿ) |
|---|---|---|
| 1 | 1990-91 | 224400 |
| 2 | 1991-92 | 2318517 |
| 3 | 1992-93 | 364692 |
| 4 | 1993-94 | 234652 |
| 5 | 1994-95 | 755611 |
| 6 | 1995-96 | 1462474 |
| 7 | 1996-97 | 3223168 |
| 8 | 1997-98 | 5787552 |
| 9 | 1998-99 | 4972616 |
| 10 | 1999-2000 | 6336693 |
| 11 | 2000-01 | 2830747 |
| 12 | 2001-02 | 3665637 |
| 13 | 2002-03 | 9129119 |
| 14 | 2003-04 | 2320455 |
| 15 | 2004-05 | 602962 |
| 16 | 2005-06 | 9621000 |
| 17 | 2006-07 | 18779783 |
| 18 | 2007-08 | 6932282 |
| 19 | 2008-09 | 10623394 |
| 20 | 2009-10 | 8717550 |
| 21 | 2010-11 | 7684181 |
| 22 | 2011-12 | 11898422 |
| 23 | 2012-13 | 53721774 |
| 24 | 2013-14 | 27104391 |
| 25 | 2014-15 | 45433973 |
| 26 | 2015-16 | 48016057 |
| 27 | 2016-17 | 105324458 |
| 28 | 2017-18 | 116982454 |
| 29 | 2018-19 | 25883749 |
| 30 | 2019-20 | 15049425 |
| 31 | 2020-21 | 3961356 |
| ಒಟ್ಟು:- | | **559963544** |